Tumbe International e-Magazine
ISSN : 2581-7728
A Multilanguage Magazine
Issue-1
Volume-5
Jan-June: 2022

# ಬೌದ್ಧ ಧರ್ಮದ ಕೊಡುಗೆಗಳು

**ದರ್ಶನ್ ಗೌಡ ಬಿ.ಎಂ**
U11GT21A0007
ಬಿಎ ಮೊದಲನೇ ವರ್ಷ, ದ್ವಿತೀಯ ಸೆಮಿಸ್ಟರ್
ಸರ್ಕಾರಿ ಪ್ರಥಮ ದರ್ಜೆ ಕಾಲೇಜು ತುಮಕೂರು -572104
darshangowdad832@gmail.com Ph.no: 9380587674

ಬೌದ್ಧ ಧರ್ಮ ಭಾರತದಲ್ಲಿ ಹುಟ್ಟಿ ಬೆಳೆದರೂ ಈ ಹೊತ್ತಿಗೆ ನಶಿಸಿದೆ. ಆದರೆ ವಿದೇಶಗಳಲ್ಲಿ ಇನ್ನೂ ಜೀವಂತವಾಗಿ ಉಳಿದಿದೆ. ಅದರ ಆದರ್ಶ ತತ್ವಗಳು ಭಾರತೀಯ ಜನಜೀವನದ ಮೇಲೆ ಅಪಾರ ಪ್ರಭಾವ ಬೀರಿವೆ. ಭಾರತೀಯ ಜನಜೀವನದ ಮೇಲೆ ಅದು ಒತ್ತಿರುವ ಮುದ್ರೆ ಇಂದಿಗೂ ಕಣ್ಮರೆಯಾಗಿಲ್ಲ. ಅದರ ಕೊಡುಗೆಗಳು ಇಂತಿವೆ.



### ರಾಜಕೀಯ ಕೊಡುಗೆಗಳು

- ಭಾರತದ ರಾಜಕೀಯ ಐಕ್ಯತೆಗೆ ಕಾರಣವಾಯಿತು.
- ಬುದ್ಧನ ಅಹಿಂಸಾತತ್ವಕ್ಕೆ ಮಾರುಹೋದ ಅಶೋಕನು ಯುದ್ಧವನ್ನು ತ್ಯಜಿಸಿ ಶಾಂತಿಯಿಂದ ಮಾನವ ಕಲ್ಯಾಣ ಸಾಧಿಸಿದನು.
- ಅದರ ಅಹಿಂಸ ತತ್ವ ಭಾರತೀಯರ ಕ್ಷಾತ್ರಗುಣವನ್ನು ಕುಂದಿಸಿತು. ಇದರ ಪರಿಣಾಮ ಭಾರತ ವಿದೇಶಿಯರ ದಾಳಿಗೆ ತುತ್ತಾದದ್ದು.
- ಬೌದ್ಧ ಸಂಘಟನೆ ಭಾರತೀಯರಲ್ಲಿ ಪ್ರಜಾಪ್ರಭುತ್ವ ಪ್ರಜ್ಞೆ ಜಾಗೃತಗೊಳಿಸಿತು.

### ಸಾಮಾಜಿಕ ಕೊಡುಗೆಗಳು

- ಬುದ್ಧನ ತತ್ವಗಳು, ಸತ್ಯ, ಪರಿಶುದ್ಧ ಜೀವನ, ಶಾಂತಿ, ಪ್ರೀತಿ, ವಾತ್ಸಲ್ಯದ ಬೀಜಗಳನ್ನು ಬಿತ್ತಿದವು.
- ಬುದ್ಧನ ತತ್ವಗಳು ಜನರಲ್ಲಿ ಆದರ್ಶ, ಪರಿಶುದ್ಧತೆಗಳನ್ನು ರೂಢಿಸಿದವು. ಅದರ ಪ್ರಭಾವದಿಂದ ಹಿಂದುಗಳು ಮಾಂಸಹಾರ ತ್ಯಜಿಸಿ ಸಸ್ಯಹಾರಿಗಳಾದರು.

### ಧಾರ್ಮಿಕ ಕೊಡುಗೆಗಳು

- ಮುಕ್ತಿ ಸಾಧನೆಗೆ ಅದರ ಸರಳವಾದ ಮಾರ್ಗವನ್ನು ತೋರಿತು.
- ಮತ ಸಹಿಷ್ಣುತೆಯನ್ನು ಬೋಧಿಸಿತು. ಶಂಕರಾಚಾರ್ಯರು, ಬೌದ್ಧ ಧರ್ಮದಿಂದ ಪ್ರಭಾವಿತರಾಗಿದ್ದರು.
- ವೆಚ್ಚದಾಯಕವಲ್ಲದ, ಸರಳವಾದ, ಸುಲಭ ಆಚರಣೆಯ ಧರ್ಮವನ್ನು ಕೊಟ್ಟಿತು.
- ವಿಶ್ವ ಸೋದರತ್ವ ಭಾವನೆ ಬಿತ್ತಿತು. ಈಗಿನ ಪಂಚಶೀಲ ತತ್ವಗಳು ಬುದ್ಧನು ಬೋಧಿಸಿದ ಮೂಲ ತತ್ವಗಳಿಂದ ಪಡೆದವುಗಳಾಗಿವೆ.
- ಹಿಂದೂ ಮಠಗಳ ಹುಟ್ಟಿಗೆ ಬೌದ್ಧ ಸಂಘವೇ ಕಾರಣವಾಗಿದೆ.

### ಅಹಿಂಸೆ

ಭಾರತದ ಸಂಸ್ಕೃತಿಗೆ ಕೊಟ್ಟ ಶ್ರೇಷ್ಠ ಕೊಡುಗೆ ಎಂದರೆ ಅಹಿಂಸೆ. ಅದು ಪ್ರಾಣಿ ಬಲಿಯನ್ನು ಖಂಡಿಸಿ ಯಜ್ಞಗಳಿಗೆ ಕೊಡುತ್ತಿದ್ದ ಪ್ರಾಣಿಬಲಿಯನ್ನು ನಿಲ್ಲಿಸಿತು. ಹೀಗಾಗಿ ಪಶು ಸಂಪತ್ತನ್ನು ರಕ್ಷಿಸಿದಂತಾಯಿತು. ಇದರಿಂದ ಪಶು ಪಾಲನೆ ಮೇಲೆ ಅವಲಂಬಿತ ರೈತರಿಗೆ ಅನುಕೂಲವಾಗಿ ಕೃಷಿ ಪ್ರಗತಿ ಸಾಧಿಸಿತು.

**ಶೈಕ್ಷಣಿಕ ಕೊಡುಗೆ**

ಭಾರತದಲ್ಲಿ ಶಿಕ್ಷಣ ವ್ಯವಸ್ಥೆ ನಿಜವಾಗಿಯೂ ಆರಂಭವಾದದ್ದು ಬುದ್ಧನ ಕಾಲದಿಂದ. ಬೌದ್ಧ ವಿಹಾರಗಳು ವಿದ್ಯಾ ಪ್ರಚಾರಕ್ಕೆ ಅಮೂಲ್ಯ ಸೇವೆ ಸಲ್ಲಿಸಿದವು. ಭಾರತೀಯ ಸಂಸ್ಕೃತಿ ವಿದೇಶಗಳಲ್ಲಿ ಜನಪ್ರಿಯತೆ ಆದವು. ನಳಂದ ಓದಂತಪುರ ವಲ್ಲಬಿ ವಿಕ್ರಮಶೀಲ ತಕ್ಷಶಿಲಾ ವಿಶ್ವವಿದ್ಯಾಲಯಗಳು ಅಂದು ಅಂತರಾಷ್ಟ್ರೀಯ ಖ್ಯಾತಿ ಗಳಿಸಿದವು.

**ಸಾಹಿತ್ಯ ಕೊಡುಗೆ**

ದೇಶಿಯ ಸಾಹಿತ್ಯ ಹಾಗೂ ದೇಶಿಯ ಭಾಷೆಗಳ ಬೆಳವಣಿಗೆಗೆ ಬೌದ್ಧ ಧರ್ಮದ ಕೊಡುಗೆ ಅಪಾರ. ಏಕೆಂದರೆ ಬುದ್ಧನು ಜನರ ಆಡು ಬಾಷೆಯಲ್ಲಿ ಬೋಧಿಸಿದನು. ಅದು ಜನಸಾಮಾನ್ಯರ ಆಡು ಭಾಷೆಗಳಾದ ಪಾಳಿ ಪ್ರಾಕೃತ ಭಾಷೆಗಳನ್ನು ಜನಪ್ರಿಯಗೊಳಿಸಿತು. ಅದೇ ಶ್ರೀಸಾಮಾನ್ಯರ ಭಾಷೆಯಾಯಿತು. ಅದೇ ಭಾಷೆಯಲ್ಲಿ ಬೌದ್ಧ ಸಾಹಿತ್ಯವು ಹೆಮ್ಮರವಾಗಿ ಬೆಳೆಯಿತು. ತ್ರಿಪಿಟಕಗಳು, ಜಾತಕ ಕಥೆಗಳು, ಇತಿಹಾಸಗಳ ರಚನೆಗೆ ಮೂಲಾಧಾರಗಳಾಗಿವೆ. ಮಿಲಿಂದಪನ್ನ, ಮಂಜುಶ್ರೀ, ಮೂಲಕಲ್ಪ, ಮಹಾವಂಶ, ದೀಪವಂಶಗಳು ಶ್ರೇಷ್ಠ ಐತಿಹಾಸಿಕ ದಾಖಲೆಗಳಾಗಿವೆ. ಅದು ಅಸಂಗ, ನಾಗಸೇನಾ, ವಸುಬಂಧು, ಅಶ್ವಘೋಷ, ನಾಗಾರ್ಜುನ, ವಸುಮಿತ್ರ, ಹ್ಯೂಯೆನ್ ತ್ಸಾಂಗ್ ರಂತಹ ಶ್ರೇಷ್ಠ ಬೌದ್ಧ ಸಾಹಿತ್ಯ ದಿಗ್ಗಜರನ್ನು ಸೃಷ್ಟಿಸಿತು. 549 ಜಾತಕ ಕಥೆಗಳ ರಚನೆಗೆ ಕಾರಣವಾಯಿತು.